**ಒ ಎಸ್ 27/24 ಡಿ.ಡಬ್ಲ್ಯೂ: 1**

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ: 02.04.2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ಶ್ರೀ.ಎಂ.ಎಸ್. ವಕೀಲರಿಂದ:</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ನನಗೆ ವಾದಿಯ ಪರಿಚಯ ಇರುತ್ತದೆ. ನನ್ನ ಮತ್ತು ವಾದಿಯ ಜಮೀನುಗಳು ಅಕ್ಕ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ . ನನ್ನ ಪ್ರತಿವಾದ ಪತ್ರಕ್ಕೆ ನಾನು ಮತ್ತು ನನ್ನ ತಾಯಿ ವಕೀಲರಿಗೆ ಮಾಹಿತಿ ಕೊಟ್ಟು ಬರೆಸಿರುತ್ತೇವೆ. ನನ್ನ ಪ್ರತಿವಾದ ಪತ್ರ ಆಂಗ್ಲ ಭಾಷೆಯಲ್ಲಿ ಇರುವ ಕಾರಣ ಅದರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ . ವಾದಿಯ ಮಗನಾದ ಬಸವಾರಾಜು ಎನ್ನುವವರು ನನ್ನ ಮತ್ತು ನನ್ನ ತಾಯಿಯ ವಿರುದ್ಧ ಓ ಎಸ್ ನಂ. 29/24 ಎಂದು ಇದೇ ನ್ಯಾಯಾಲಯದಲ್ಲಿ ಮತ್ತೊಂದು ದಾವೆ ಹೂಡಿರುತ್ತಾರೆ ಎಂದರೆ ಸರಿ .

ನಾನು ವಾದಿಯಿಂದ ದಿ: 20.01.2021 ರಂದು ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ . ಸದರಿ ಸಾಲಕ್ಕೆ ನಾನು ತಿಂಗಳಿಗೆ ಶೇಕಡ 2% ರಂತೆ ವಾರ್ಷಿಕ ಶೇಡಕ 24% ರಂತೆ ಬಡ್ಡಿ ಕೊಡುವುದಾಗಿ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಸೇರಿ ವಾದಿಯಿಂದ ಪಡೆದ ಸಾಲಕ್ಕೆ ನಿಪಿ 1 ರಂತೆ ಪ್ರೋ ನೋಟ್ ಮತ್ತು ಹಣ ಸಂದಾಯ ರಶೀದಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಖಾಲಿ ಚಾಪಾ ಕಾಗದಕ್ಕೆ ಸಹಿ ಮಾಡಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಾದಿಯನ್ನು ಹೊರತು ಪಡಿಸಿ ಬೇರೆಯವರೊಂದಿಗೆ ಯಾವುದೇ ಹಣ ಕಾಸಿನ ವ್ಯವಹಾರ ಮಾಡಿರುವುದಿಲ್ಲ.

ನಾನು ಸಾಮಾನ್ಯವಾಗಿ ಖಾಲಿ ಚಾಪಾ ಕಾಗದದ ಮೇಲೆ ಸಹಿ ಮಾಡುವುದಿಲ್ಲ. ನಾನು ಮತ್ತು ನಮ್ಮ ತಾಯಿ ವಾದಿಯಿಂದ ಒಂದು ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡು ವಾದಿಗೆ ನಿಪಿ 1 ರಂತೆ ಸಾಕ್ಷಿಗಳ ಸಮಕ್ಷಮ ಪ್ರೋ ನೋಟ್ ಮತ್ತು ಹಣ ಸಂದಾಯ ರಶೀದಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿಪಿ 1 ನ್ನು ಎಸ್ ಎಲ್ ಚಿಕ್ಕಣ್ಣ ಎನ್ನುವ ಪತ್ರ ಬರಹಗಾರರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಕಂಡು ಬರುವ ಹೆಬ್ಬೆಟ್ಟು ಗುರುತು ನನ್ನ ತಾಯಿಯದು ಇದ್ದು ಮತ್ತು ಸಹಿ ನನ್ನದೇ ಇದ್ದು ಸದರಿ ಸಹಿಗಳನ್ನು ನಾವು ವಾದಿಯ ಮನೆಯಲ್ಲಿ ಹಾಕಿರುತ್ತೇವೆ. ನಾವಿಬ್ಬರು ಎರಡು ಖಾಲಿ

ಚಾಪಾ ಕಾಗದಕ್ಕೆ ಸಹಿ ಮಾಡಿರುತ್ತೇವೆ. ನಾವಿಬ್ಬರು ನಿಪಿ 1 ರಲ್ಲಿ ಒಂದು ಬಾರಿ ಮತ್ತು ಮತ್ತೊಂದು ಖಾಲಿ ಚಾಪಾ ಕಾಗದಲ್ಲಿ ಒಂದು ಬಾರಿ ಒಟ್ಟಾಗಿ ಎರಡು ಬಾರಿ ಮಾತ್ರ ಸಹಿ ಮಾಡಿರುತ್ತೇವೆ. ನಿಪಿ 1 ರ ಮೊದಲ ಪುಟದಲ್ಲಿ ಕಾಣುವ ಹೆಬ್ಬಟ್ಟು ನನ್ನ ತಾಯಿಯದ್ದು ಮತ್ತು ಸಹಿ ನನ್ನದು ಎಂದರೆ ಸರಿ . ಅದೇ ರೀತಿ ನಿಪಿ 1 ರ ಎರಡನೇ ಪುಟದಲ್ಲಿ ಕಾಣುವ ಹೆಬ್ಬೆಟ್ಟುಗಳು ನನ್ನ ತಾಯಿಯದ್ದೇ ಇರುತ್ತದೆ ಮತ್ತು ಸಹಿಗಳು ನನ್ನದೇ ಇರುತ್ತದೆ. ನಿಪಿ 1 ನ್ನು ತಯಾರಿಸಿದ ನಂತರ ಅದನ್ನು ಓದಿ ತಿಳಿದು 3 ಕಡೆ ನಾನು ಮತ್ತು ನನ್ನ ತಾಯಿ ಸಹಿಗಳನ್ನು ಮಾಡಿದ್ದರು ಸಹ ಉದ್ದೇಶ ಪೂರ್ವಕವಾಗಿ ನಾನು ಖಾಲಿ ಹಾಳೆಗೆ ಸಹಿ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 1 ರ ಚಾಪಾ ಕಾಗದವನ್ನು ವಾದಿಯೇ ತಂದಿರುತ್ತಾರೆ. ನಿಪಿ 1 ರಲ್ಲಿ ಸದರಿ ಕಾಗದವನ್ನು ನನ್ನ ತಾಯಿ ಖರೀದಿಸಿರುವುದಾಗಿ ನಮೂದು ಇರುತ್ತದೆ ಎಂದರೆ ಸರಿ . ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ವಾದಿಗೆ ರೂ.50,000/- ಸಾಲದ ಮೊತ್ತವನ್ನು ಮತ್ತು ಎರಡು ವರ್ಷಗಳ ಬಡ್ಡಿ ಯನ್ನು ಪಾವತಿಸಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಮತ್ತು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ವಾದಿಗೆ ಯಾವುದೇ ಅಸಲು ಮೊತ್ತ ಮತ್ತು ಬಡ್ಡಿಯನ್ನು ಯಾವತ್ತು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ವಾದಿಗೆ ಖಾಲಿ ಪತ್ರಕ್ಕೆ ಸಹಿ ಪಡೆದುಕೊಂಡಿರುವ ಬಗ್ಗೆ ಮತ್ತು ಅದನ್ನು ವಾಪಾಸ್ಸು ಕೊಡಬೇಕೆಂದು ಹೇಳಿ ಯಾವುದೇ ತಿಳುವಳಿಕೆ ಪತ್ರವನ್ನು ವಾದಿಗೆ ಕಳುಹಿಸಿರುವುದಿಲ್ಲ. ವಾದಿಗೆ ವಯಸ್ಸಾಗಿದ್ದು ಅವರು ಓಡಾಡಲು ಕಷ್ಟ ಪಡುತ್ತಾರೆ ಎಂದರೆ ಸರಿ . ನಾನು ವಾದಿಗೆ ಒಟ್ಟಾರೆಯಾಗಿ ರೂ.1,72,000/- ಹಣವನ್ನು ಕೊಡಲು ಭಾಧ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ವಾದಿ ನನಗೆ ಮತ್ತು ನನ್ನ ತಾಯಿಗೆ ನಿಪಿ 2 ರಂತೆ ತಿಳುವಳಿಕೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿ . ಸದರಿ ನೋಟೀಸ್ ನಮಗೆ ಜಾರಿಯಾಗಿರುತ್ತದೆ ಎಂದರೆ ಸರಿ . ಅದರಂತೆ ನಾನು ನಿಪಿ 8(ಎ) ರಂತೆ ವಾದಿಗೆ ಪ್ರತ್ಯುತ್ತರ ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿ . ನಾನು ವಾದಿಗೆ ಕಾನೂನು ಬದ್ಧವಾಗಿ ಕೊಡಬೇಕಾಗಿರುವಂತಹ ಹಣವನ್ನು ಕೊಡುವುದರಿಂದ ತಪ್ಪಿಸಿಕೊಳ್ಳುವುದಾಗಿ ಸುಳ್ಳು ಪ್ರತ್ಯುತ್ತರ ನೋಟೀಸ್ ಕಳುಹಿಸಿ , ಸುಳ್ಳು ಪ್ರತಿವಾದಿ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ನಾನು ಕಾನೂನು ಬದ್ದವಾಗಿ ವಾದಿಗೆ ಬರೆದುಕೊಟ್ಟಿದ್ದರು ಸಹ ಉದ್ದೇಶಪೂರ್ವಕವಾಗಿ ಖಾಲಿ ಚಾಪಾ ಕಾಗದಕ್ಕೆ ಸಹಿ ಮಾಡಿಕೊಟ್ಟಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ .ಎಂ.ಎಫ್.ಸಿ., ತಿ.ನರಸೀಪುರ.**